# ಕ್ಷಯ ಬೇಡ ಭಯ

ಕ್ಷಯ ರೋಗದಿಂದ ನಮ್ಮ ದೇಶದಲ್ಲಿ ಈಗಲೂ ಅನೇಕ ಮಂದಿ ಸಾವನ್ನಪ್ಪುತ್ತಿದ್ದಾರೆ. ಇದೊಂದು ಅಂಟುರೋಗವಾಗಿದ್ದು, ರೋಗಾಣುಗಳು ಗಾಳಿಯಲ್ಲಿ ವೇಗವಾಗಿ ಹರಡಿ ಆರೋಗ್ಯವಂತನನ್ನೂ ಬಲಿ ತೆಗೆದುಕೊಳ್ಳಬಹುದು. ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದರೆ ಅಪಾಯದಿಂದ ಪಾರಾಗಬಹುದು.

★ ಡಾ.ಡಿ.ಕೆ.ಮಹಾಬಲರಾಜು




ವಿಶ್ವದಾದ್ಯಂತ ಮಾರ್ಚ್ 24 ರಂದು 'ವಿಶ್ವ ಕ್ಷಯ ರೋಗ ದಿನ' ಆಚರಿಸುತ್ತಾರೆ. ಇದೇ ದಿನ 1882ರಲ್ಲಿ ಕ್ಷಯ ರೋಗಾಣುಗಳನ್ನು ಕಂಡು ಹಿಡಿಯಲಾಗಿದೆ. ಕ್ಷಯ ರೋಗಾಣು ಪತ್ತೆಯಾಗಿ (1882) 136 ವರ್ಷಗಳಾಗಿವೆ. ಪ್ರಭಾವಿ ಲಸಿಕೆ ದೊರೆತು (1921) 97 ವರ್ಷಗಳಾಗಿವೆ. ಔಷಧಿಗಳು ಲಭ್ಯವಾಗಿ (1947) 71 ವರ್ಷಗಳಾಗಿವೆ. ಆದರೂ ನಮ್ಮ ದೇಶದಲ್ಲಿ ಕ್ಷಯ ರೋಗ ಇನ್ನೂ ತಾಂಡವವಾಡುತ್ತಿದೆ.

ವಿಶ್ವದಿಂದ 'ಸಿಡುಬು' ಕಾಯಿಲೆಯನ್ನು ಬೇರು ಸಮೇತ ಕಿತ್ತೆಸೆದಿದ್ದೇವೆ. ಪೋಲಿಯೋವನ್ನು ನಾಮಾವಶೇಷ ಮಾಡಿ ಬಿಟ್ಟಿದ್ದೇವೆ, ಇನ್ನೂ ಅನೇಕ ಕಾಯಿಗಳು ಪಲಾಯನ ಮಾಡುತ್ತಿವೆ. ಹೀಗಿದ್ದೂ ಭಾರತದಲ್ಲಿ ಈಗಲೂ 2.70 ದಶಲಕ್ಷ ಕ್ಷಯರೋಗಿಗಳಿದ್ದಾರೆ . ಪ್ರತಿವರ್ಷ ಕ್ಷಯರೋಗದಿಂದ 4–5 ಲಕ್ಷ ಜನ ಸಾಯುತ್ತಿದ್ದಾರೆ. ಇತರೆ ಎಲ್ಲಾ ಅಂಟು ರೋಗಗಳ ಒಟ್ಟಾರೆ ಸಾವಿನ ಸಂಖ್ಯೆಗಿಂತ, ಕ್ಷಯ ರೋಗ ಒಂದರಿಂದಲೇ ಅಕಾಲಿಕವಾಗಿ ಸಾಯುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಈ ದೇಶದಲ್ಲಿ ಪ್ರತಿದಿನ 4000 ಜನರು ಕ್ಷಯದಿಂದ ಅಸು ನೀಗುತ್ತಿದ್ದಾರೆ.

ಕ್ಷಯದ ಕಾರಣದಿಂದಾಗಿ ಪ್ರತಿ ವರ್ಷ 3 ಲಕ್ಷ ಮಕ್ಕಳು ಶಾಲೆಯನ್ನು ಬಿಟ್ಟು ದುಡಿಯಲು ಸೇರುತ್ತಾರೆ. ಕ್ಷಯ ರೋಗಿಯ ಸಾವಿನಿಂದಾಗಿ ವಿಧವೆ ವಿಧುರರ ಸಂಖ್ಯೆ ಹೇರಳವಾಗುತ್ತದೆ. ಒಳ್ಳೆ ದುಡಿಯುವ ವಯಸ್ಸಿನಲ್ಲಿಯೇ 'ಕ್ಷಯ' ಉಂಟಾಗುವುದು ಹೆಚ್ಚು. ಹೀಗಾಗಿ ಕ್ಷಯ ದಿಂದಾಗಿ ದುಡಿಮೆ ದಿನಗಳು ನಷ್ಟವಾಗಿ ಕುಟುಂಬದ ಆದಾಯ ತಗ್ಗುತ್ತದೆ.

## ಸಾಮಾನ್ಯ ಅಂಟು ರೋಗ

**ಮಾರ್ಚ್ 24 ವಿಶ್ವ ಕ್ಷಯ ರೋಗ ದಿನ**

ಕ್ಷಯ ಅಂತಹ ದೊಡ್ಡ ಕಾಯಿಲೆ ಅಲ್ಲ. ಇತರೆ ಎಲ್ಲ ಅಂಟು ರೋಗಗಳಂತೆ ಇದೂ ಸಹ ಸೋಂಕು ರೋಗ. ಕ್ಷಯಾಣು ಎಂಬ ಸೂಕ್ಷ್ಮಾಣು (ರೋಗಾಣು)ವಿನಿಂದ ಕ್ಷಯ ರೋಗ ಉಂಟಾಗುತ್ತದೆ. ಕ್ಷಯ ರೋಗಿ ಕೆಮ್ಮಿದಾಗ, ಉಗುಳಿದಾಗ, ಉಸಿರಾಡುವಾಗ ರೋಗಾಣುಗಳು ಹೊರಹೊಮ್ಮಿ ಗಾಳಿಯನ್ನು ಸೇರುತ್ತದೆ. ಇದೇ ಗಾಳಿಯನ್ನು ಉಸಿರೆಳೆದುಕೊಳ್ಳುವವರಿಗೆ ರೋಗಾಣು ಅಂಟಿಕೊಳ್ಳಬಹುದು. ಕ್ಷಯ ರೋಗ ಉಂಟಾಗಬಹುದು. ಕ್ಷಯ ರೋಗ ಗಾಳಿಯ ಮೂಲಕ ಹರಡುವ ಕಾಯಿಲೆಯಾದುದರಿಂದ ಉಸಿರಾಡುವ ನಮ್ಮೆಲ್ಲರಿಗೂ ಕ್ಷಯ ರೋಗ ತಗಲುತ್ತದೆ.

## ಕ್ಷಯ ರೋಗದ ಲಕ್ಷಣಗಳು

ಕ್ಷಯ ರೋಗಾಣುಗಳು ದೇಹಕ್ಕೆ ಹೊಕ್ಕ ದಿನದಿಂದ, ಒಂದು ತಿಂಗಳು ಆಗುವುದರ ಒಳಗೆ, ಕ್ಷಯ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

* ಹದಿನೈದು ದಿನಗಳಿಗಿಂತ ಹೆಚ್ಚು ದಿನ ಸಂಜೆಯಾದ ಮೇಲೆ ಜ್ವರ ಕಾಣಿಸುವುದು.
* ಹದಿನೈದು ದಿನಗಳಿಗಿಂತ ಹೆಚ್ಚು ದಿನ ಬಿಡದೆ ಕಾಡುವ ಕೆಮ್ಮು
* ದೇಹದ ತೂಕ ಕಡಿಮೆಯಾಗುವುದು, ದೇಹ ದುರ್ಬಲಗೊಳ್ಳುವುದು (ಸೊರಗುವುದು)

ಕ್ಷಯ ರೋಗ (ಟಿ.ಬಿ.) ಲಕ್ಷಣಗಳೆಲ್ಲಾ ಸಾಮಾನ್ಯವಾಗಿ ಸೌಮ್ಯವಾಗಿರುತ್ತವೆಯೇ ಹೊರತು ಉಗ್ರವಾಗಿರುವುದಿಲ್ಲ. ಹೀಗಾಗಿ ಕ್ಷಯ ರೋಗ ತಗಲಿದವರು ತಾತ್ಕಾಲಿಕ ಉಪಶಮನ ಮಾತ್ರ ಪಡೆಯುತ್ತಾ ಹೇಗೋ ದಿನಚರಿಯನ್ನು ನಡೆಸುತ್ತಾರೆಯೇ ಹೊರತು ಸೂಕ್ತ ಪರಿಣಾಮಕಾರಿ ಚಿಕಿತ್ಸೆ ಪಡೆಯುವುದಿಲ್ಲ. ಚಿಕಿತ್ಸೆ ಪಡೆಯದ ಒಬ್ಬ ಕ್ಷಯ ರೋಗಿ ಪ್ರತಿ ವರ್ಷ 15–20 ಜನರಿಗೆ ಕ್ಷಯ ರೋಗವನ್ನು ಅಂಟಿಸುತ್ತಾ ಇರುತ್ತಾನೆ.